**ದಿನಾಂಕ 31.07.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎ.ಎನ್ ವಕೀಲರಿಂದಃ

ನನ್ನ ತಾತ ಅಂಜಿನಪ್ಪ ರವರಿಗೆ 3 ಜನ ಗಂಡು ಮಕ್ಕಳು. ಇಬ್ಬರು ಹೆಣ್ಣು ಮಕ್ಕಳು. ಸದರಿ ಇಬ್ಬರು ಹೆಣ್ಣು ಮಕ್ಕಳು ಮರಣ ಹೊಂದಿದ್ದು ಅವರ ವಂಶಸ್ಥರು ಯಾರು ಇರುವುದಿಲ್ಲ. ನನಗೆ ಆಂಗ್ಲ ಭಾಷೆ ಓದಲು ಬರುವುದಿಲ್ಲ. ನಿಪಿ 1 ವಂಶ ವೃಕ್ಷವನ್ನು ಸಾಕ್ಷಿಗೆ ತೋರಿಸಿ ಸದರಿ ದಾಖಲೆಯನ್ನು ಬರೆಸಲು ಯಾರು ಮಾಹಿತಿ ನೀಡಿರುತ್ತಾರೆ ಎಂದರೆ ನಾನೆ ಮಾಹಿತಿ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ಗೌರಿಬಿದನೂರು ನ್ಯಾಯಾಲಯದ ಬಳಿ ಈ ದಾಖಲೆ ಬರೆಸಲು ಮಾಹಿತಿ ಕೊಟ್ಟಿರುತ್ತೇನೆ.

ನರಸಿಂಹಪ್ಪ ಎಂದರೆ ನನ್ನ ತಂದೆ. ಅವರಿಗೆ ನನ್ನ ಸೇರಿದಂತೆ ಇಬ್ಬರು ಗಂಡು ಮಕ್ಕಳು, 3 ಜನ ಹೆಣ್ಣು ಮಕ್ಕಳು, ನನ್ನ ಅಣ್ಣ ಲಕ್ಷ್ಮೀನಾರಾಯಣ ಮರಣಹೊಂದಿರುತ್ತಾರೆ, ಅವರಿಗೆ ಹೆಂಡತಿ ಮತ್ತು ಮಕ್ಕಳು ಇರುತ್ತಾರೆ. ಸದರಿ ರವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಸೇರಿಸಿಲ್ಲ. ನಮ್ಮ ಸಹೋದರಿಯರಾದ ರಾಮಾಂಜಿನಮ್ಮ, ಗಿರಿಜಾ ಮತ್ತು ಪಾರ್ವತಿ ರವರನ್ನು ಸಹ ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಸೇರಿಸಿಲ್ಲ.

ನನ್ನ ತಾತನ 2 ನೇ ಮಗನಾದ ಸಂಜೀವರಾಯಪ್ಪನಿಗೆ ಇಬ್ಬರು ಗಂಡು ಮಕ್ಕಳು, ಮೂರು ಜನ ಹೆಣ್ಣು ಮಕ್ಕಳು, ಅವರುಗಳೆಂದರೆ ಸರಸ್ವತಮ್ಮ, ಕೃಷ್ಣವೇಣಿ, ಸುಶೀಲಮ್ಮ, ಅಂಜಿನಪ್ಪ ಮತ್ತು ಶ್ರೀನಿವಾಸ. ಸದರಿ ಸರಸ್ವತಮ್ಮ, ಕೃಷ್ಣವೇಣಿ, ಸುಶೀಲಮ್ಮ ರವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಸೇರಿಸಿಲ್ಲ. ನನ್ನ ತಾತನ 3 ನೇ ಮಗನಾದ ಕೇಶವಯ್ಯ ರವರಿಗೆ ಒಬ್ಬನೆ ಮಗ. ಆತನ ಹೆಸರು ಕೆ. ರಾಮಕೃಷ್ಣಯ್ಯ. ನನ್ನ ತಂದೆ ನರಸಿಂಹಪ್ಪ, ಸಂಜೀವರಾಯಪ್ಪ ಮತ್ತು ಕೇಶವಯ್ಯ ರವರಿಗೆ ಬೇರೆ ಬೇರೆ ಕಡೆ ಆಸ್ತಿಗಳು ಇದ್ದು ಭಾಗ ಮಾಡಿಕೊಂಡಿದ್ದಾರೆ. ಸದರಿ ಸ್ವತ್ತುಗಳನ್ನು ಈ ದಾವೆಯಲ್ಲಿ ದಾವಾ ಸ್ವತ್ತುಗಳನ್ನಾಗಿ ಸೇರಿಸಿಲ್ಲ.

ಕೇಶವಯ್ಯ ರವರಿಗೆ ಕರ್ನಾಟಕದ ಅನೂಡಿ ಗ್ರಾಮದಲ್ಲಿ ಸ್ವತ್ತುಗಳಿವೆ ಎಂದರೆ ಸರಿ. ಸದರಿ ಸ್ವತ್ತುಗಳನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ಈ ದಾವೆಯನ್ನು ಸಲ್ಲಿಸಲು ಅಗತ್ಯವಾದ ದಾಖಲೆಗಳನ್ನು ತಾಲ್ಲೂಕು ಕಛೇರಿಯಿಂದ ನಾನೆ ಪಡೆದುಕೊಂಡಿರುತ್ತೇನೆ. 5 ನೇ ಪ್ರತಿವಾದಿಯು ಈ ದಾವೆಯಲ್ಲಿ ಏನು ತಕರಾರು ಸಲ್ಲಿಸಿದ್ದಾರೆ ಎಂದು ನಾನು ತಿಳಿದುಕೊಂಡಿಲ್ಲ.

ಸ.ನಂ. 61 ರಲ್ಲಿನ ಸ್ವತ್ತು ನಿಮ್ಮ ತಾತ ಅಂಜಿನಪ್ಪರವರ ಹೆಸರಿನಲ್ಲಿದ್ದು, ಅವರ ಮರಣನಂತರ ನಿಮ್ಮ ತಂದೆ ಮತ್ತು ಕೇಶವಯ್ಯ ರವರು ಲಿಖಿತವಾಗಿ ಒಪ್ಪಿಗೆ ನೀಡಿದ ನಂತರ ನಿಮ್ಮ ಚಿಕ್ಕಪ್ಪ ಸಂಜೀವರಾಯಪ್ಪನ ಹೆಸರಿಗೆ ಐ ಹೆಚ್ ಆರ್ 1/87-88 ರ ರೀತ್ಯ ಹಕ್ಕು ಬದಲಾವಣೆ ಆಗಿರುತ್ತದೆ ಎಂದರೆ ಸಾಕ್ಷಿ ಅದರ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಹಕ್ಕು ಬದಲಾವಣೆಯ ಬಗ್ಗೆ ನನಗೆ ತಿಳಿದಿದ್ದರು ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ತದನಂತರ 2 ರಿಂದ 4 ನೇ ಪ್ರತಿವಾದಿಯು ದಿ: 20.05.1988 ರ ಕ್ರಯ ಪತ್ರದಂತೆ ದಾವ ಸ್ವತ್ತನ್ನು ಹಾಜಿ ವಿ ಅಬ್ದುಲ್ ರವರಿಗೆ ಮಾರಾಟ ಮಾಡಿದ್ದಾರೆಂದರೆ ನನಗೆ ಗೊತ್ತಿಲ್ಲ.

ನನ್ನ ತಂದೆ 2019 ರಲ್ಲಿ ನನ್ನ ಹೆಸರಿಗೆ ಒಂದು ವಿಲ್ ನ್ನು ಬರೆದುಕೊಟ್ಟಿರುತ್ತಾರೆ, ಯಾವ ಸ್ವತ್ತಿಗೆ ಸಂಬಂಧಿಸಿದಂತೆ ವಿಲ್ ನ್ನು ಬರೆದುಕೊಟ್ಟಿರುತ್ತಾರೆಂದರೆ ಸಾಕ್ಷಿ ಸರ್ವೆ ನಂಬರ್ ಹೇಳಲು ಬರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ವಿಲ್ ನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ. ಸದರಿ ವಿಲ್ ನೊಂದಾಯಿತ ದಾಖಲೆಯಾಗಿರುತ್ತದೆ. ಸದರಿ ದಾಖಲೆಗಳನ್ನು ನಾನು ಮುಂದಿನ ಬಾರಿ ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ.

<u>ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟಿ ಸವಾಲಿಗೆ ಸಮಯವಕಾಶ ಕೋರಿದ್ದು, ಪಾಟೀ ಸವಾಲನ್ನು ಮುಂದೂಡಲಾಯಿತು.</u>

ಓದಿ ಹೇಳಿ ಕೇಳಿ ಸರಿ ಇದೆ

Sd/-
ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.,
ಗೌರಿಬಿದನೂರು.